

ಅನ್ನಪೂರ್ಣಾ ಪರ್ವತಶ್ರೇಣಿ ನಡುವಿನ ಪುಟ್ಟ ಹಳ್ಳಿ

ವಿಹಾರ. ವಿಹಾರ ಮುಗಿಸಿ ಮೈ ಕೊರೆದು ಥರಗುಟ್ಟುವಂತೆ ಮಾಡುವ ಚಳಿಯನ್ನು ಆಹ್ಲಾದಿಸುತ್ತ ಬಿಸಿ ಬಿಸಿ ರೋಟಿಗೆ ಬೆಣ್ಣೆ ಸವರಿ ದಾಲಿನಲ್ಲಿ ಅದ್ದಿ ತಿನ್ನುವಾಗ ಊಟದ ಸೊಗಸೇ ಎಲ್ಲಕ್ಕಿಂತ ಮೇಲೆನಿಸಿಬಿಟ್ಟಿತು.

ಪೋಖರಾದಿಂದ ಕಠ್ಮಂಡುವಿನ ಹಾದಿಯಲ್ಲಿ ಮನೋಕಾಮನ ದೇವಿಯ ದೇಗುಲವಿದೆ. ಮೂರು ಬೆಟ್ಟಗಳ ನಡುವೆ ಇರುವ ಏಷ್ಯಾದ ಅತಿದೊಡ್ಡ ರೋಪ್ ವೇ (3.1 ಕಿ.ಮೀ) ಇದಾಗಿದೆ. 550 ರೂಪಾಯಿಗೆ ಎರಡೂ ಬದಿಯ ಸವಾರಿ. ಬೆಟ್ಟದ ಮೇಲಿರುವ ದೇವಿ ದರ್ಶನಕ್ಕೆ ಸರತಿ ಸಾಲು. ಮನೋಕಾಮನದ ಪಕ್ಕದಲ್ಲೇ ಚಿತ್ವಾನ್ ಹೆಸರಿನ ಘೋಷಿತ ಅರಣ್ಯವಿದೆ. ಅಲ್ಲಿರುವ ಪ್ರಾಣಿಗಳನ್ನು ಸಫಾರಿ ಮೂಲಕ ಕಾಣಬಹುದು.

ಕಠ್ಮಂಡುವಿನ ಪಶುಪತಿನಾಥನಿಗೆ ಮಹಾಭಾರತದ ಸಂಬಂಧವಿರುವುದಾಗಿ ಪುರಾಣ ಹೇಳುತ್ತದೆ. ಮಹಾಭಾರತ ಯುದ್ಧಾನಂತರ ಪ್ರಾಯಶ್ಚಿತ್ತಕ್ಕಾಗಿ ಕೃಷ್ಣನ ಸಲಹೆಯಂತೆ ಹಿಮಾಲಯದಲ್ಲಿ ಶಿವನನ್ನು ಕಾಣಲು ಪಾಂಡವರು ತೆರಳುತ್ತಾರೆ. ಸುಲಭದಲ್ಲಿ ದರ್ಶನವೀಯದ ಶಿವ ದೊಡ್ಡ ಗೂಳಿಯ ರೂಪ ಧರಿಸಿರುತ್ತಾನೆ. ಭೀಮ ಈಶ್ವರನನ್ನು ಕಂಡ ಸಂಭ್ರಮದಲ್ಲಿ ಬಿಗಿದು ಹಿಡಿದಾಗ ತಪ್ಪಿಸಿಕೊಂಡ ಪೃಷ್ಟ ಭಾಗವು ಕೇದಾರವಾಗಿಯೂ, ಮುಖವು ಕಠ್ಮಂಡುವಿನಲ್ಲಿ ಪಶುಪತಿನಾಥನಾಗಿಯೂ ಬದಲಾದವು ಎಂಬ ಉಲ್ಲೇಖವಿದೆ.

ಪಶುಪತಿನಾಥನ ದೇಗುಲಕ್ಕೆ ನಾಲ್ಕು ಬಾಗಿಲುಗಳಿವೆ. ಒಟ್ಟು ಐವರು ಅರ್ಚಕರುಗಳಿದ್ದು, ಅವರೆಲ್ಲರೂ ದಕ್ಷಿಣ ಭಾರತೀಯರೇ. ಭಾಗಮತಿ ದಡದಲ್ಲಿ ಸಂಜೆ ನಡೆಯುವ ಆರತಿ ಕೂಡ ಪ್ರವಾಸೀ ಆಕರ್ಷಣೆ. ಬುಡಾ ನೀಲಕಂಠದಲ್ಲಿರುವ ಸುಪ್ತ ವಿಷ್ಣುವಿನ ಬೃಹತ್ ಪ್ರತಿಮೆ, ದೂರಕ್ಕೂ ಕಾಣಿಸುವ ಬೃಹತ್ ಈಶ್ವರನ ನಿಂತ ಭಂಗಿ, ಅದರ ಪಕ್ಕದಲ್ಲೇ ಇರುವ ತೂಗು ಸೇತುವೆ ಕಾಣದೇ ಇದ್ದರೆ ಕಠ್ಮಂಡುವಿನ ದರ್ಶನ ಪೂರ್ತಿಯಾಗದು.

‘ಭಕ್ತಾಪುರ ಸ್ಕ್ವೇರ್’ ನೇಪಾಳವನ್ನಾಳಿದ ರಾಜಮನೆತನಗಳ, ಅರಮನೆಗಳ ಗುಚ್ಛ. ಈ ಪ್ರಾಂಗಣದ ದೇಗುಲಗಳನ್ನು ನೋಡಿಕೊಂಡು ಪಕ್ಕದ ಅಂಗಡಿಗಳಲ್ಲಿ ದಂಡಿಯಾಗಿ ಸಿಗುವ ಲಸ್ಸಿ ಸವಿಯಲೇಬೇಕು. ಕಠ್ಮಂಡುವಿನಲ್ಲಿರುವ ಡ್ಯಾನ್ಸ್ ಬಾರುಗಳು, ಹುಕ್ಕಾ ಕೇಂದ್ರಗಳು ಮತ್ತು ಜೂಜು ಕಟ್ಟೆಗಳಾದ ಕ್ಯಾಸಿನೊಗಳೂ ಪ್ರವಾಸಿಗಳನ್ನು ಆಕರ್ಷಿಸದೇಬಿಡವು.

ಕಠ್ಮಂಡು ಸಮೀಪದ ನಾಗರಕೋಟ್ ಅಥವಾ ಪೋಖರಾ ಸಮೀಪದ ಸಾರಂಗ್ ಕೋಟ್ ಬೆಟ್ಟಗಳಿಂದ ಸೂರ್ಯೋದಯ, ಸೂರ್ಯಾಸ್ತಗಳ ವೀಕ್ಷಣೆ ಅದ್ಭುತ ಅನುಭವ. ಈ ಎರಡೂ ಬೆಟ್ಟಗಳ ಮೇಲಿರುವ ಊರುಗಳಲ್ಲಿನ ರೆಸಾರ್ಟುಗಳಲ್ಲಿ ಉಳಿದು ಬೆಳಗಿನ ಸೂರ್ಯೋದಯಕ್ಕೆ ಸಾಕ್ಷಿಯಾಗಬಹುದು.

ವಾಪಸು ಜನಕಪುರದ ಮಾರ್ಗದಲ್ಲಿ ಬಂದರೆ ರಾಮಾಯಣದಲ್ಲಿ ಉಲ್ಲೇಖಿತವಾದ ಹಲವು ಸ್ಥಳಗಳ ದರ್ಶನ ಸಾಧ್ಯ. ಬೆಟ್ಟಬೆಟ್ಟಗಳ ನಡುವೆ ಕೊಂಡಿಗಳಂತೆ ಕಾಣುವ ತೂಗು ಸೇತುವೆಗಳು ನೇಪಾಳದಲ್ಲಿ ಸಾಮಾನ್ಯ. ಅವುಗಳಲ್ಲಿ ಒಂದೆರಡರಲ್ಲಾದರೂ ಓಡಾಡಿ ಬಂದರೆ, ವೀಸಾ, ಪಾಸ್‌ಪೋರ್ಟುಗಳಿಲ್ಲದ ವಿದೇಶ ಪ್ರಯಾಣದ ನೆನಪು ಹಲವು ಕಾಲ ಕಾಡಬಲ್ಲದು.

ಪ್ರತಿಕ್ರಿಯಿಸಿ: feedback@sudha.co.in